# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 933
2. ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
3. ಉತ್ತರಿಸಬೇಕಾದ ದಿನಾಂಕ : 18.12.2018
4. ಉತ್ತರಿಸಬೇಕಾದ ಸಚಿವರು : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಬ್ರಿಮ್ಸ್) ಅವ್ಯವಸ್ಥೆಯ ಆಗರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಸಂಸ್ಥೆಯಲ್ಲಿ ಪೀಠೋಪಕರಣ, ಯಂತ್ರೋಪಕರಣ, ಔಷಧಿ ಖರೀದಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ / ಭ್ರಷ್ಟಾಚಾರ ನಡೆದಿದ್ದು, ಭ್ರಷ್ಟಾಚಾರದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಬೀದರ್ ವೈದ್ಯಕೀಯ ಕಾಲೇಜಿನಲ್ಲಿ ಸಿಬ್ಬಂದಿ ನೇಮಕಾತಿ ಹಾಗೂ ಖರೀದಿಗಳಲ್ಲಿ ಆರ್ಥಿಕ ನಷ್ಟ ಉಂಟುಮಾಡಿರುವ ಕುರಿತು ಶ್ರೀ ವಿ.ಡಿ ನಿಶ್ಚಿತ್, ಹಿಂದಿನ ಆರ್ಥಿಕ ಸಲಹೆಗಾರರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇವರು ಬ್ರೀಮ್ಸ್, ಬೀದರಿಗೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಕೈಗೊಂಡು ದಿನಾಂಕ:19/06/2018 ರಂದು ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿರುತ್ತಾರೆ ಮತ್ತು ಅಪರ ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಇವರು ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖರೀದಿ, ಸಿಬ್ಬಂದಿ ನೇಮಕ ಮತ್ತು ಇತರೆ ಕಾಮಗಾರಿ/ಖರೀದಿಗಳಲ್ಲಿ ಹಣದ ಮತ್ತು ಅಧಿಕಾರ ದುರುಪಯೋಗ ಹಾಗೂ ಅವ್ಯವಹಾರ ನಡೆದಿರುವ ಕುರಿತು ತನಿಖೆ ನಡೆಸಿ ದಿನಾಂಕ:24.03.2018ರ ಪತ್ರದಲ್ಲಿ ಭ್ರಷ್ಟಾಚಾರ ಎಸಗಿರುವ 1) ಡಾ॥ ಸಿ ಚನ್ನಣ್ಣಾ-ನಿರ್ದೇಶಕರು 2) ಶ್ರೀ ಆನಂದಸಾಗರ ರೆಡ್ಡಿ-ಮುಖ್ಯ ಆಡಳಿತಾಧಿಕಾರಿ 3) ಡಾ॥ ಶಿವಕುಮಾರ ಶೆಟಕಾರ-ವೈದ್ಯಕೀಯ ಅಧೀಕ್ಷಕರು 4) ಶ್ರೀಮತಿ ಅನುಷಯಾ 5) ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ-ಕಛೇರಿ ಅಧೀಕ್ಷಕರು 6) ಶ್ರೀ ಬಾಬು ಕೋಟಿ 7) ಶ್ರೀ ಪ್ರಕಾಶ ಮಾಳಗೆ 8) ಶ್ರೀಮತಿ ವರ್ಷಾ 9) ಶ್ರೀ ಮಾಚೆ ಕಲ್ಲಪ್ಪಾ 10) ಶ್ರೀ ಶಿವಾಜಿ ಇವರುಗಳ ವಿರುದ್ಧ ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಳ್ಳಲು ಪೂರ್ವಾನುಮತಿ ನೀಡುವಂತೆ ಸರ್ಕಾರವನ್ನು ಕೋರಿದ್ದರ ಮೇರೆಗೆ ಸದರಿಯವರುಗಳ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಕಲಂ 13(1)(ಡಿ) ಮತ್ತು 13(2)ರಡಿಯಲ್ಲಿ ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಳ್ಳಲು ಸರ್ಕಾರವು ದಿನಾಂಕ: 29/06/2018ರಂದು ಅನುಮತಿ ನೀಡಿದೆ.<br><br>ತದನಂತರ ಭ್ರಷ್ಟಾಚಾರ ನಿಗ್ರಹದಳ, ಬೀದರ್‌ನವರು ದಿನಾಂಕ:28/07/2018 ರಂದು ನಿರ್ದೇಶಕರು ಮತ್ತು ವೈದ್ಯಕೀಯ ಅಧೀಕ್ಷಕರನ್ನು ಹೊರತುಪಡಿಸಿ ಉಳಿದ 8 ಅಧಿಕಾರಿ/ನೌಕರರಾದ (1) ಶ್ರೀ ಆನಂದಸಾಗರ ರೆಡ್ಡಿ, ನಿವೃತ್ತ ಮುಖ್ಯ ಆಡಳಿತಾಧಿಕಾರಿಗಳು ಬ್ರೀಮ್ಸ್ ಬೀದರ್ (2) ಶ್ರೀಮತಿ ಅನುಷಯಾ, ಸಹಾಯಕ ಆಡಳಿತಾಧಿಕಾರಿಗಳು, ಬ್ರೀಮ್ಸ್ ಬೋಧಕ ಆಸ್ಪತ್ರೆ ಬೀದರ್ (ಹೆಚ್.ಎಫ್.ಡಬ್ಲ್ಯೂ ನೌಕರರು) (3) ಶ್ರೀ ಪ್ರಕಾಶ ಎಸ್, ಕಛೇರಿ ಅಧೀಕ್ಷಕರು (ಹೆಚ್.ಎಫ್.ಡಬ್ಲ್ಯೂ ನೌಕರರು) (4) ಶ್ರೀ ಬಾಬು ಫಾಳೆಪ್ಪ, ಕಛೇರಿ ಅಧೀಕ್ಷಕರು (ಹೆಚ್.ಎಫ್.ಡಬ್ಲ್ಯೂ ನೌಕರರು) (5) ಶ್ರೀ ಪ್ರಕಾಶ ಮಾಳಗೆ, ಪ್ರ.ದ.ಸ (ಹೆಚ್.ಎಫ್.ಡಬ್ಲ್ಯೂ ನೌಕರರು) (6) ಶ್ರೀಮತಿ ವರ್ಷ., ಪ್ರ.ದ.ಸ ಬ್ರೀಮ್ಸ್ ಬೀದರ್ (7) ಶ್ರೀ ಮಾಚೆ ಕಲ್ಲಪ್ಪ, ನಿವೃತ್ತ ಅಧಿಕಾರಿ (8) ಶ್ರೀ ಶಿವಾಜಿ, ದ್ವಿ.ದ.ಸ. (ಹೊರಗುತ್ತಿಗೆ ನೌಕರರು) ಇವರುಗಳ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿಯಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಿದ್ದು ಸದರಿ |

ವರದಿಯಲ್ಲಿ ನಮೂದಿತ ಸಿಬ್ಬಂದಿಗಳು ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರ್ಗಿ ಪೀಠದ ಮೊರೆ ಹೋಗಿ ಜಾಮೀನು ಪಡೆದಿದ್ದು, ಅದಾದ ನಂತರ ಕಾನೂನು ಸಲಹೆಗಾರರ ಸಲಹೆಯ ಮೇರೆಗೆ ಸದರಿ ಸಿಬ್ಬಂದಿಗಳನ್ನು ಪುನಃ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲಾಗಿರುತ್ತದೆ. ಮುಂದುವರಿದು, ಈ ಕೆಳಕಂಡ ಅಧಿಕಾರಿ/ನೌಕರರುಗಳು ಸರ್ಕಾರದ ಆದೇಶ ಸಂಖ್ಯೆ: ಆಕುಕ 122 ಎಂಎಸ್‌ಎಫ್ 2018, ದಿನಾಂಕ:29.06.2018ಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ತಡೆಯಾಜ್ಞೆಯನ್ನು ತಂದಿರುತ್ತಾರೆ. ವಿವರ ಕೆಳಕಂಡಂತಿದೆ:

| ಕ್ರ.ಸಂ | ಅಧಿಕಾರಿ/ಸಿಬ್ಬಂದಿ ಹೆಸರು | ಪ್ರಕರಣಗಳ ವಿವರ |
|---|---|---|
| 1. | ಡಾ॥ ಸಿ ಚನ್ನಣ್ಣಾ- ನಿರ್ದೇಶಕರು | ರಿಟ್ ಅರ್ಜಿ ಸಂಖ್ಯೆ: 28544-45/2018 ತಡೆಯಾಜ್ಞೆ ನೀಡಿದ ದಿ:06.07.2018 |
| 2. | ಶ್ರೀ ಆನಂದಸಾಗರ ರೆಡ್ಡಿ ಮುಖ್ಯ ಆಡಳಿತಾಧಿಕಾರಿ, | ರಿಟ್ ಅರ್ಜಿ ಸಂಖ್ಯೆ:38414/2018 ತಡೆಯಾಜ್ಞೆ ನೀಡಿದ ದಿ:31.08.2018 |
| 3. | ಡಾ॥ ಶಿವಕುಮಾರ ಶೆಟಕಾರ ಹಿಂದಿನ ವೈದ್ಯಕೀಯ ಅಧೀಕ್ಷಕರು, | ರಿಟ್ ಅರ್ಜಿ ಸಂಖ್ಯೆ:28544-45/2018 ತಡೆಯಾಜ್ಞೆ ನೀಡಿದ ದಿ:06.07.2018 |
| 4. | ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ ಕಛೇರಿ ಅಧೀಕ್ಷಕರು | ರಿಟ್ ಅರ್ಜಿ ಸಂಖ್ಯೆ:29892-95/2018 ತಡೆಯಾಜ್ಞೆ ನೀಡಿದ ದಿ:13.07.2018 |
| 5. | ಶ್ರೀ ಬಾಬು ಕೋಟಿ- ಕಛೇರಿ ಅಧೀಕ್ಷಕರು | ರಿಟ್ ಅರ್ಜಿ ಸಂಖ್ಯೆ:29892-95/2018 ತಡೆಯಾಜ್ಞೆ ನೀಡಿದ ದಿ:13.07.2018 |
| 6. | ಶ್ರೀ ಪ್ರಕಾಶ ಮಾಳಗೆ ಪ್ರಥಮ ದರ್ಜೆ ಸಹಾಯಕರು | ರಿಟ್ ಅರ್ಜಿ ಸಂಖ್ಯೆ:29892-95/2018 ತಡೆಯಾಜ್ಞೆ ನೀಡಿದ ದಿ:13.07.2018 |
| 7. | ಶ್ರೀ ಮಾಚೆ ಕಲ್ಲಪ್ಪಾ, ಪ್ರಥಮ ದರ್ಜೆ ಸಹಾಯಕರು | ರಿಟ್ ಅರ್ಜಿ ಸಂಖ್ಯೆ:29892-95/2018 ತಡೆಯಾಜ್ಞೆ ನೀಡಿದ ದಿ:13.07.2018 |

ಮುಂದುವರೆದು, ಶ್ರೀ ನಿಶ್ಚಿತ್ ಬಿ.ಡಿ, ಆರ್ಥಿಕ ಸಲಹೆಗಾರರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು ಇವರನ್ನು ದಿನಾಂಕ:09/02/2018 ರಂದು ಬ್ರಿಮ್ಸ್ ಸಂಸ್ಥೆಯಲ್ಲಿ ಲಿಪಿಕ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಕಾಶ ಎಸ್. ಮತ್ತು ಶ್ರೀ ಪ್ರಕಾಶ ಮಾಳಗೆ ರವರು ಮಾಡಿರುವ ಅವ್ಯವಹಾರದ ಬಗ್ಗೆ ತನಿಖೆ ಕೈಗೊಳ್ಳಲು ಆದೇಶಿಸಲಾಗಿದ್ದು, ಸದರಿ ತನಿಖಾಧಿಕಾರಿಯು ದಿನಾಂಕ:24/04/2018 ಮತ್ತು 25/04/2018 ರಂದು ಬ್ರಿಮ್ಸ್ ಬೀದರಿಗೆ ಖುದ್ದಾಗಿ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಕೈಗೊಂಡು ದಿನಾಂಕ: 19/06/2018 ರಂದು ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿರುತ್ತಾರೆ. ಇದನ್ನು ಪರಿಶೀಲಿಸಿ ಸರ್ಕಾರದಿಂದ ದಿನಾಂಕ:04/08/2018 ರಂದು ಈ ಕೆಳಕಂಡ ಆರೋಪಿತ ಅಧಿಕಾರಿ/ನೌಕರರಿಗೆ ದೋಷಾರೋಪಣಾ ಪಟ್ಟಿ ಜಾರಿಮಾಡಲಾಗಿದೆ.

<table>
<tr>
<td></td>
<td></td>
<td>
<table>
<tr><th>ಕ್ರ.ಸಂ</th><th>ಅಧಿಕಾರಿ/ಸಿಬ್ಬಂದಿ ಹೆಸರು</th></tr>
<tr><td>1.</td><td>ಡಾ|| ಸಿ ಚನ್ನಣ್ಣಾ-ನಿರ್ದೇಶಕರು</td></tr>
<tr><td>2.</td><td>ಶ್ರೀ ಆನಂದಸಾಗರ ರೆಡ್ಡಿ, ಮುಖ್ಯ ಆಡಳಿತಾಧಿಕಾರಿ,</td></tr>
<tr><td>3.</td><td>ಡಾ|| ಶಿವಕುಮಾರ ಶೆಟಕಾರ, ಹಿಂದಿನ ವೈದ್ಯಕೀಯ ಅಧೀಕ್ಷಕರು</td></tr>
<tr><td>4.</td><td>ಶ್ರೀಮತಿ ಅನುಷಯಾ, ಸಹಾಯಕ ಆಡಳಿತಾಧಿಕಾರಿ</td></tr>
<tr><td>5.</td><td>ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ, ಕಛೇರಿ ಅಧೀಕ್ಷಕರು</td></tr>
<tr><td>6.</td><td>ಶ್ರೀ ಬಾಬು ಕೋಟಿ-ಕಛೇರಿ ಅಧೀಕ್ಷಕರು</td></tr>
<tr><td>7.</td><td>ಶ್ರೀ ಪ್ರಕಾಶ ಮಾಳಗೆ, ಪ್ರಥಮ ದರ್ಜೆ ಸಹಾಯಕರು</td></tr>
<tr><td>8.</td><td>ಶ್ರೀಮತಿ ವರ್ಷಾ, ಪ್ರಥಮ ದರ್ಜೆ ಸಹಾಯಕರು</td></tr>
</table>
ಆರೋಪಿತ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ದೋಷಾರೋಪಣೆ ಪಟ್ಟಿ ಹೊರಡಿಸಲಾಗಿದ್ದು, ನಮೂದಿತ ನೌಕರರು ಸಲ್ಲಿಕೆಯಾದ ದೋಷಾರೋಪಣೆ ಪಟ್ಟಿಗೆ ಕಂಡಿಕೆವಾರು ಹಾಗೂ ಆರೋಪವಾರು ತಮ್ಮ ಲಿಖಿತ ಸಮಜಾಯಿಷಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿ ಸಮಜಾಯಿಷಿಗಳನ್ನು ಪರಿಶೀಲಿಸಲಾಗುತ್ತಿದೆ.
</td>
</tr>
<tr>
<td>ಇ)</td>
<td>ಹಳಿ ತಪ್ಪಿರುವ ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು ಸರಿದಾರಿಗೆ ತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td>
<td>
ದಿನಾಂಕ:20.01.2015ರ ಅಧಿಸೂಚನೆಯಲ್ಲಿ ಡಾ|| ಚನ್ನಣ್ಣ ಸಿ ಇವರನ್ನು 4 ವರ್ಷಗಳ ಅವಧಿಗೆ ಅಥವಾ ವಯೋನಿವೃತ್ತಿಯವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಬ್ರಿಮ್ಸ್ ಸಂಸ್ಥೆಯ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಇವರ ಅವಧಿಯು ದಿನಾಂಕ:19.01.2019ಕ್ಕೆ ಮುಕ್ತಾಯಗೊಳ್ಳಲಿದೆ. ನಿರ್ದೇಶಕರ ಹುದ್ದೆಗೆ ಬೇರೊಬ್ಬರನ್ನು ನೇಮಿಸಲು ಕ್ರಮವಹಿಸಲಾಗುವುದು.
ಮುಂದುವರೆದು ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತಿರುವ ಶ್ರೀಮತಿ ಅನುಷಯಾ, ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ, ಶ್ರೀ ಬಾಬು ಕೋಟೆ ಮತ್ತು ಶ್ರೀ ಪ್ರಕಾಶ ಮಾಳಗೆ ಇವರು ಮೂಲತಃ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂಪಡೆದು ಸದರಿ ಹುದ್ದೆಗಳಿಗೆ ಬೇರೆ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ದಿನಾಂಕ:07.08.2018ರಂದು ಪತ್ರವನ್ನು ಬರೆಯಲಾಗಿದೆ.
ಶ್ರೀ ಪ್ರಕಾಶ ಶರಣಪ್ಪಾ ಮಡಿವಾಳ, ಕಛೇರಿ ಅಧೀಕ್ಷಕರು ಮತ್ತು ಶ್ರೀ ಪ್ರಕಾಶ ಮಾಳಿಗೆ, ಕಛೇರಿ ಅಧೀಕ್ಷಕರು ಇವರುಗಳ ವಿರುದ್ಧ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅಕ್ರಮ ಎಸಗಿರುವುದಾಗಿ ಆರೋಪಗಳು ಇರುವುದರಿಂದ ಸದರಿ ಸಿಬ್ಬಂದಿಗಳನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಖೆಯಿಂದ ಹಣ ಕಾಸಿನ ವ್ಯವಹಾರವಿಲ್ಲದ ಶಾಖೆಗಳಿಗೆ ಆಂತರಿಕ ಬದಲಾವಣೆ ಮಾಡುವಂತೆ ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ ಇವರಿಗೆ ದಿನಂಕ:17.11.2018ರಲ್ಲಿ ಪತ್ರವನ್ನು ಬರೆಯಲಾಗಿತ್ತು. ಅದರನ್ವಯ ಬ್ರಿಮ್ಸ್ ಸಂಸ್ಥೆಯಲ್ಲಿ ಆಡಳಿತ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲಿಪಿಕ ಸಿಬ್ಬಂದಿಗಳಿಗೆ ವಿಷಯಗಳ ಮರುಹಂಚಿಕೆ ಮಾಡಿ ಸಂಸ್ಥೆಯ ನಿರ್ದೇಶಕರು ದಿನಾಂಕ:19.11.2018ರಂದು ಆದೇಶವನ್ನು ಹೊರಡಿಸಿರುತ್ತಾರೆ.
</td>
</tr>
</table>

ಆಕುಕ 417 ಎಂಎಸ್‌ಎಫ್ 2018

(ಡಿ.ಕೆ ಶಿವಕುಮಾರ್)
ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು